SRI SATHYA SAI UNIVERSITY FOR HUMAN EXCELLENCE
Sri Sathya Sai Vidyaniketanam, Navanihal, Okali Post,
Kamalapur Taluk, Kalaburagi District, Karnataka – 585313
+91 78990 00030 info@sssuhe.ac.in sssuhe.ac.in

# ಸಾವಯವ ರಾಗಿ ಬೆಳೆಯುವ ರೈತರಿಗೆ ಸ್ವಯಂಸೇವಾ ಪ್ರಮಾಣೀಕರಣ ಯೋಜನೆಯ

# ಪ್ರಮಾಣೀಕರಣ ಪ್ರಕ್ರಿಯೆ

## 0. ಪರಿಚಯ

ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯವನ್ನು (SSSUHE) 2019ರಲ್ಲಿ ರಾಜ್ಯ ಖಾಸಗಿ ವಿಶ್ವವಿದ್ಯಾಲಯವಾಗಿ ಕರ್ನಾಟಕದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಅವರಿಂದ ಸ್ಥಾಪಿಸಲ್ಪಟ್ಟಿತು. SSSUHE ಯ ಮಾರ್ಗದರ್ಶಕ ತತ್ವ "ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ – ಸ್ವಾತ್ಮೋದ್ಧಾರ ಮತ್ತು ಸಮಾಜದ ಕಲ್ಯಾಣ". ವಿಶ್ವವಿದ್ಯಾಲಯದ ಘೋಷವಾಕ್ಯ "ಯೋಗಃ ಕರ್ಮಸು ಕೌಶಲಂ – ಕಾರ್ಯದಲ್ಲಿ ಪರಿಪೂರ್ಣತೆಯೆ ಯೋಗ"ವು ಎಲ್ಲಾ ಕ್ಷೇತ್ರಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

SSSUHE ಯ ದೃಷ್ಟಿ: ಪುರಾತನ ಭಾರತೀಯ ಸಂಸ್ಕೃತಿ–ಮೌಲ್ಯಗಳ ಆಧಾರದ ಮೇಲೆ ಜಾಗತಿಕ ಮಟ್ಟದ ಗುಣಮಟ್ಟದ ಉನ್ನತ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ಒದಗಿಸುವುದು ಹಾಗೂ ಸಾಮರ್ಥ್ಯವಂತ ಕೈಗಳು, ಪ್ರಖರ ಮನಸ್ಸುಗಳು ಮತ್ತು ಕರುಣಾಮಯಿ ಹೃದಯಗಳನ್ನು ಹೊಂದಿದ ವ್ಯಕ್ತಿಗಳನ್ನು ವಿಶ್ವ ಕಲ್ಯಾಣಕ್ಕಾಗಿ ರೂಪಿಸುವುದು. ಇಲ್ಲಿ ಕೇವಲ ಶಿಕ್ಷಣ ಮಾತ್ರವಲ್ಲದೆ ವಸತಿ, ಊಟ ಮತ್ತು ದಿನನಿತ್ಯದ ಅಗತ್ಯಗಳನ್ನೂ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಗ್ರಾಮೀಣ ಪ್ರದೇಶದ ಯುವಜನ ವಿಶ್ವವಿದ್ಯಾಲಯದ ಫಲಾನುಭವಿಗಳು. ಪ್ರಸ್ತುತ ಶೇಕಡಾ 70 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಬಡತನ ರೇಖೆಗಿಂತ ಕೆಳಗಿನ ವರ್ಗಕ್ಕೆ ಸೇರಿದವರು ಮತ್ತು ಸುಮಾರು ಶೇಕಡಾ 32 ಮೊದಲ ತಲೆಮಾರಿನ ಸಾಕ್ಷರರು.

SSSUHE ಪುರಾತನ ಭಾರತೀಯ ಗುರುಕುಲ ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಆಧಾರದ ಮೇಲೆ ಆಧ್ಯಾತ್ಮಿಕ ಹಾಗೂ ಲೌಕಿಕ ಜ್ಞಾನವನ್ನು ಒಗ್ಗೂಡಿಸುವ ವಿಶಿಷ್ಟ ಸಂಸ್ಥೆಯಾಗಿದೆ. ಇದರ ಪಠ್ಯಕ್ರಮವು ವೇದ ಅಧ್ಯಯನ, ಪ್ರದರ್ಶನ ಕಲೆಗಳು, ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಶಿಕ್ಷಣ, ಕೃಷಿ, ಮಾನಸಿಕ ಆರೋಗ್ಯ, ಕ್ರೀಡೆ ಮತ್ತು ಯೋಗ, ದೈಹಿಕ ಶಿಕ್ಷಣ ಮತ್ತು ವೃತ್ತಿಪರ ಕೌಶಲ್ಯಗಳನ್ನು ಒಳಗೊಂಡಿದೆ.

ಸ್ಥಾಪನೆಯ ಐದು ವರ್ಷಗಳೊಳಗೆ ವಿಶ್ವವಿದ್ಯಾಲಯವು ಹಲವಾರು ಮೈಲಿಗಲ್ಲುಗಳನ್ನು ಸಾಧಿಸಿದೆ. ಭಾರತದ ಮೊಟ್ಟ ಮೊದಲ ಉಚಿತ ಖಾಸಗಿ ಗ್ರಾಮೀಣ ವೈದ್ಯಕೀಯ ಮಹಾವಿದ್ಯಾಲಯವಾದ ಶ್ರೀ ಮಧುಸೂಧನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯನ್ನು ಈ ವಿಶ್ವವಿದ್ಯಾಲಯವು ಸ್ಥಾಪಿಸಿದ್ದು, ಅದನ್ನು 2023ರ ಮಾರ್ಚ್ ತಿಂಗಳಲ್ಲಿ ಮಾನ್ಯ ಪ್ರಧಾನ

ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. 2023 ಜುಲೈನಲ್ಲಿ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು SSSUHE ಯ ದ್ವಿತೀಯ ಘಟಿಕೋತ್ಸವದಲ್ಲಿ ಭಾಗವಹಿಸಿದರು. ದುಬೈಯಲ್ಲಿ AsiaOne ಆತಿಥ್ಯ ವಹಿಸಿದ್ದ ಏಷ್ಯಾ-ಆಫ್ರಿಕಾ ವ್ಯವಹಾರ ಮತ್ತು ಸಾಮಾಜಿಕ ವೇದಿಕೆಯು 20ನೇ ಆವೃತ್ತಿಯಲ್ಲಿ SSSUHE ಗೆ Greatest Brand 2023 ಗೌರವ ನೀಡಿದೆ. 2024 ಜೂನ್ 6 ರಂದು ನವದೆಹಲಿಯಲ್ಲಿ ನಡೆದ Economic Times Education Excellence Awards ನಲ್ಲಿ SSSUHE ಗೆ GOLD ಪುರಸ್ಕಾರ ದೊರಕಿದೆ. Emory University (USA), AIIMS (ದೆಹಲಿ), BHU (ವಾರಾಣಸಿ) ಮುಂತಾದ ಪ್ರಮುಖ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಹಾಗೂ ಸಂಶೋಧನಾ ಸಹಕಾರಕ್ಕಾಗಿ ಒಡಂಬಡಿಕೆ (MoU) ಗಳನ್ನು ಸಹಿ ಮಾಡಲಾಗಿದೆ.

ವಿಶ್ವವಿದ್ಯಾಲಯವು 'ಒಂದು ಜಗತ್ತು, ಒಂದು ಕುಟುಂಬ' ಎಂಬ ಸಂದೇಶದೊಂದಿಗೆ ಪೌಷ್ಟಿಕತೆ, ಶಿಕ್ಷಣ, ಆರೋಗ್ಯ ಮತ್ತು ಆಧ್ಯಾತ್ಮ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಶ್ರೀ ಮಧುಸೂದನ ಸಾಯಿ ಜಾಗತಿಕ ಮಾನವೀಯ ಮಿಷನ್‌ನ ಅವಿಭಾಜ್ಯ ಅಂಗವಾಗಿದೆ. 2011 ರಿಂದ ಸದ್ಗುರು ಶ್ರೀ ಮಧುಸೂದನ ಸಾಯಿ ಅವರು 60 ಕ್ಕಿಂತ ಹೆಚ್ಚು ದೇಶಗಳಲ್ಲಿ ಅಭ್ಯುದಯ ಸಂಬಂಧಿ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಅವರದೇ ಮಾತಿನಲ್ಲಿ : "ಸಮಾಜದ ಅತ್ಯಂತ ಮುಖ್ಯ ಸದಸ್ಯ ಮಗು. ಮಗು ಭವಿಷ್ಯದ ಮರದ ಬೀಜ. ಹಾಗಾಗಿ, ಪ್ರತಿ ಮಗುವಿಗೂ ಪೌಷ್ಟಿಕತೆ, ಶಿಕ್ಷಣ ಮತ್ತು ಆರೋಗ್ಯದ ಮೂಲ ಅಗತ್ಯಗಳನ್ನು ಒದಗಿಸುವುದು ಕೇವಲ ಪೋಷಕರ ಜವಾಬ್ದಾರಿಯಲ್ಲ; ಅದು ಸಂಪೂರ್ಣ ಸಮಾಜದ ಸಾಮೂಹಿಕ ಜವಾಬ್ದಾರಿಯಾಗಿದೆ. ಸಹಾಯದ ಅವಶ್ಯಕತೆ ಇರುವವರನ್ನು ಎತ್ತಿ ಹಿಡಿದರೆ ದೇಶ ಮತ್ತು ಜಗತ್ತನ್ನು ಎತ್ತಿ ಹಿಡಿದಂತೆ – ಏಕೆಂದರೆ ನಾವು ಎಲ್ಲರೂ ಸಂಪೂರ್ಣವಾಗಿ ಪರಸ್ಪರ ಸಂಬಂಧಿತರು – 'ವಸುದೈವ ಕುಟುಂಬಕಂ – ಒಂದು ಜಗತ್ತು, ಒಂದು ಕುಟುಂಬ'." ಈ ಸೇವಾಕಾರ್ಯದ ಆಶಯವಾಗಿದೆ.

**1. ವ್ಯಾಪ್ತಿ (Scope)**

ಈ ದಸ್ತಾವೇಜು SSSUHE ಅನುಸರಿಸಬೇಕಾದ ಮೌಲ್ಯಮಾಪನ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಯನ್ನು – ಅರ್ಜಿ ಸ್ವೀಕಾರದಿಂದ ಪ್ರಮಾಣಪತ್ರ ನೀಡುವಿಕೆ ಹಾಗೂ ಪ್ರಮಾಣೀಕರಣ ನಿರ್ವಹಣೆ (maintenance) ವರೆಗೆ – ವಿವರಿಸುತ್ತದೆ.

ಈ ಪ್ರಮಾಣೀಕರಣವು ಕೆಳಗಿನ ಎರಡು ಆಯ್ಕೆಗಳನ್ನು ಒಳಗೊಂಡಿದೆ :

a. ನಿಗದಿತ ಮಾನದಂಡದಂತೆ ಸಾಮರ್ಥ್ಯ ಪ್ರದರ್ಶಿಸಬಲ್ಲ ಓರ್ವ ರೈತ.

b. ನಿಗದಿತ ಮಾನದಂಡದಂತೆ ಒಟ್ಟಾಗಿ ಸಾಮರ್ಥ್ಯ ಪ್ರದರ್ಶಿಸಬಲ್ಲ ರೈತ ಕುಟುಂಬ.

2. ಉಲ್ಲೇಖಗಳು (References)

ಕನಿಷ್ಠ ಸಾಮರ್ಥ್ಯ ಮಾನದಂಡ (Minimum Standard of Competence) ವಿಷಯ 0 (ಕರಡು)

3. ವ್ಯಾಖ್ಯಾನಗಳು (Definitions)

a. ರೈತ : ಸಾವಯವ ರಾಗಿ ಉತ್ಪಾದನೆಗಾಗಿ ಭೂಮಿಯನ್ನು ಕೃಷಿ ಮಾಡುವ ಯಾವುದೇ ವ್ಯಕ್ತಿ.

b. ರೈತ ಕುಟುಂಬ : ರಾಗಿ ಕೃಷಿಯ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಹಾಗೂ ತಮ್ಮ ಕರ್ತವ್ಯಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಹೊಂದಿರುವ ಕುಟುಂಬದ ಸದಸ್ಯರು.

4. ಪ್ರಮಾಣೀಕರಣ ಪ್ರಕ್ರಿಯೆಯ ವಿವರಣೆ (Description of the certification process)

4.1 ಅರ್ಜಿ (Application)

i. ವೈಯಕ್ತಿಕ ರೈತ ಅಥವಾ ರೈತ ಕುಟುಂಬದ ಮುಖ್ಯಸ್ಥ (ಅಥವಾ ಕುಟುಂಬದ ಪರವಾಗಿ ಅಧಿಕೃತ ವ್ಯಕ್ತಿ) ಅನುಬಂಧ ೧ ರಲ್ಲಿ ನೀಡಿರುವ ನಿಗದಿತ ಅರ್ಜಿ ನಮೂನೆಯಲ್ಲಿ SSSUHE ಗೆ ಅರ್ಜಿ ಸಲ್ಲಿಸಬೇಕು.

ii. ರೈತ ಕುಟುಂಬದ ಸಂದರ್ಭದಲ್ಲಿ, ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಪ್ರತ್ಯೇಕವಾಗಿ ಮೇಲ್ಕಂಡ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

iii. ಅರ್ಜಿಯೊಂದಿಗೆ ಅರ್ಜಿ ನಮೂನೆಯಲ್ಲಿ ಸೂಚಿಸಿರುವ ಎಲ್ಲಾ ದಾಖಲೆಗಳನ್ನು ಸೇರಿಸಬೇಕು.

iv. ರೈತನು ಕೆಳಗಿನ ಚಟುವಟಿಕೆಗಳಿಗೆ ಸಂಬಂಧಿಸಿದ GPS ಟ್ಯಾಗ್ ಮಾಡಿದ ಛಾಯಾಚಿತ್ರಗಳು, ವೀಡಿಯೊಗಳು ಅಥವಾ ದಾಖಲೆಗಳ ರೂಪದಲ್ಲಿ ಕೌಶಲ್ಯದ ಸಾಕ್ಷ್ಯವನ್ನು ಸಲ್ಲಿಸಬೇಕು, ಇದಕ್ಕಷ್ಟೇ ಸೀಮಿತವಾಗಿರದೆ ಇತರೆ ದಾಖಲೆಗಳೂ ಒಳಗೊಂಡಿರಬಹುದು:

- ಬೀಜ ಸಂಗ್ರಹ/ಮೂಲ
- ಬಿತ್ತನೆ
- ಕೃಷಿ ಪೂರಕ ಪದಾರ್ಥಗಳು (inputs) ಖರೀದಿ

**4.2 ಅರ್ಜಿ ಪರಿಶೀಲನೆ (Application review)**

i. ರಾಗಿ ಬೆಳೆಯುವ ರೈತರಿಂದ ಸರಿಯಾಗಿ ಭರ್ತಿಮಾಡಿದ ಅರ್ಜಿ ಹಾಗೂ ಅಗತ್ಯ ಎಲ್ಲಾ ಅನುಬಂಧಗಳ ಸಾಕ್ಷ್ಯಗಳನ್ನು ಪಡೆದ ನಂತರ, SSSUHEಯು ಅರ್ಜಿದಾರರು ಯೋಜನೆಯ ಮಾನದಂಡಗಳನ್ನು ಪೂರೈಸಿದ್ದಾರೆಯೇ ಎಂಬುದನ್ನು ಪರಿಶೀಲಿಸುತ್ತದೆ.

ii. ಅರ್ಜಿಯು ಅಪೂರ್ಣವಾಗಿದ್ದರೆ, ಅರ್ಜಿ ಸ್ವೀಕರಿಸಿದ 3 ಕಾರ್ಯದಿನಗಳೊಳಗೆ ಅಗತ್ಯ ಮಾಹಿತಿಯನ್ನು ಅರ್ಜಿದಾರರಿಂದ ಕೇಳಲಾಗುತ್ತದೆ.

iii. ಅರ್ಜಿದಾರರು ತಪ್ಪಿಹೋದ ಮಾಹಿತಿಯನ್ನು 15 ಕಾರ್ಯದಿನಗಳೊಳಗೆ SSSUHEಗೆ ಮರಳಿ ಸಲ್ಲಿಸಲು ವಿನಂತಿಸಲಾಗುತ್ತದೆ.

iv. ಪರಿಶೀಲನೆಗೊಂಡ ಮತ್ತು ಪೂರ್ಣಗೊಂಡ ಅರ್ಜಿಯನ್ನು SSSUHEಯು ಅರ್ಜಿದಾರಿಗೆ ಸ್ವೀಕೃತಿ (acknowledgement) ರೂಪದಲ್ಲಿ ನೀಡುತ್ತದೆ.

**4.3 ಮೌಲ್ಯಮಾಪನ ತಂಡ (ET) ನೇಮಕ (Appointment of Evaluation Team)**

i. ET ಯಲ್ಲಿ ಒರ್ವ ಅರ್ಹ ಪ್ರಮಾಣೀಕರಣ ತಜ್ಞ (ತಂಡ ಮುಖ್ಯಸ್ಥ – TL), ಒರ್ವ ಕೃಷಿ ತಜ್ಞ (ತಾಂತ್ರಿಕ ತಜ್ಞ – TE) ಮತ್ತು ಅಗತ್ಯವಿದ್ದರೆ ಇನ್ನೋರ್ವ ಹಿರಿಯ ರಾಗಿ ರೈತ (ಮೌಲ್ಯಮಾಪನ ನಡೆಯುವ ಜಿಲ್ಲೆಯಿಂದ ಹೊರತು ಪಡಿಸಿ ಬೇರೆ ಜಿಲ್ಲೆಯಿಂದ) ಇರಲಿದ್ದು, ಇದರಲ್ಲಿ ಹಿತಾಸಕ್ತಿ ಸಂಘರ್ಷ (COI) ಅಂಶವನ್ನು ಪರಿಶೀಲಿಸಿ ಹಾಗೂ ಲಭ್ಯತೆಯನ್ನು ಖಚಿತಪಡಿಸಿಕೊಂಡ ನಂತರ SSSUHE ಈ ಮೌಲ್ಯಮಾಪಕರನ್ನು ನೇಮಿಸುತ್ತದೆ.

ii. ಪ್ರಮಾಣೀಕರಣ ತಜ್ಞ, ತಾಂತ್ರಿಕ ತಜ್ಞ ಮತ್ತು ಹಿರಿಯ ರಾಗಿ ರೈತನ ಅರ್ಹತಾ ಮಾನದಂಡಗಳನ್ನು ಅನುಬಂಧ ೨ ರಲ್ಲಿ ನೀಡಲಾಗಿದೆ.

iii. ಮೌಲ್ಯಮಾಪನ ಆರಂಭಿಸುವ ಮೊದಲು ET ಯವರು ನಿಷ್ಪಕ್ಷಪಾತ, ಸತ್ಯನಿಷ್ಠೆ, ಸ್ವತಂತ್ರ, ಗೌಪ್ಯ ಮತ್ತು ಹಿತಾಸಕ್ತಿ ಸಂಘರ್ಷ ಇತ್ಯಾದಿಗಳ ಕುರಿತು Code of Conduct ಒಪ್ಪಂದಕ್ಕೆ ಸಹಿ ಮಾಡಬೇಕು.

**4.4 ಮೌಲ್ಯಮಾಪನಕ್ಕೆ ಸಿದ್ಧತೆ (Preparation for Evaluation)**

i. ಅಭ್ಯರ್ಥಿಗಳ ಸಾಮರ್ಥ್ಯ ಮೌಲ್ಯಮಾಪನವು ಯೋಜನೆಯ ಮಾನದಂಡಗಳು ಹಾಗೂ ತಜ್ಞ ಸಮಿತಿ ಅಭಿವೃದ್ಧಿಪಡಿಸಿದ ಕನಿಷ್ಠ ಸಾಮರ್ಥ್ಯ ಮಾನದಂಡ (MSC) ಆಧಾರಿತವಾಗಿರುತ್ತದೆ. ಇದರಲ್ಲಿ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ (KSA) ಮೌಲ್ಯಮಾಪನ ವಿಧಾನವನ್ನು ಅನುಸರಿಸಲಾಗುತ್ತದೆ.

ii. ET ತಂಡ ಮುಖ್ಯಸ್ಥ (TL) ಇತರ ಸದಸ್ಯರು ಮತ್ತು SSSUHE ಜೊತೆ ಸಲಹೆ ಮಾಡಿಕೊಂಡು ಮೌಲ್ಯಮಾಪನ ಯೋಜನೆಯನ್ನು ತಯಾರಿಸುತ್ತಾರೆ.

iii. SSSUHE ಅಭ್ಯರ್ಥಿಗಳಿಗೆ ದಿನಾಂಕ, ಸಮಯ, ಸ್ಥಳ ಮತ್ತು ಮೌಲ್ಯಮಾಪನ ಯೋಜನೆ ಬಗ್ಗೆ ಕನಿಷ್ಠ 15 ಕಾರ್ಯದಿನಗಳ ಮುಂಚಿತವಾಗಿ ಮಾಹಿತಿಯನ್ನು ನೀಡಲಾಗುತ್ತದೆ.

iv. ಮೌಲ್ಯಮಾಪನಕ್ಕಾಗಿ ಅಗತ್ಯ ಸಂಪನ್ಮೂಲಗಳು ಮತ್ತು ಸೌಲಭ್ಯಗಳನ್ನು ET ಗೆ ಲಭ್ಯವಾಗುವಂತೆ SSSUHEಯು ಖಾತ್ರಿತಪಡಿಸುತ್ತದೆ.

**4.5 ಮೌಲ್ಯಮಾಪನ (Evaluation)**

i. ಮೌಲ್ಯಮಾಪನವನ್ನು ಅರ್ಜಿಯೊಂದಿಗೆ ಸಲ್ಲಿಸಿದ ಮಾಹಿತಿ ಮತ್ತು ಸಾಕ್ಷ್ಯಗಳ ಆಧಾರದ ಮೇಲೆ ಯೋಜನೆಯಂತೆ ET ಸದಸ್ಯರು ಪ್ರತ್ಯೇಕವಾಗಿ/ಒಟ್ಟಾಗಿ ನಡೆಸುತ್ತಾರೆ. ರೈತ ಅಥವಾ ರೈತ ಕುಟುಂಬದಿಂದ ಯಾವುದೇ ಹೆಚ್ಚುವರಿ ಸಾಕ್ಷ್ಯವನ್ನು ET ಸ್ವೀಕರಿಸಬಹುದು. ಅಗತ್ಯವಿದ್ದಲ್ಲಿ ಪರಿಶೀಲನಾ ಪಟ್ಟಿಗಳನ್ನು ಬಳಸಲಾಗುತ್ತದೆ. ಮೌಲ್ಯಮಾಪನವು ಯೋಜನೆಯ ಮಾನದಂಡಗಳು ಮತ್ತು MSC ಪ್ರಕಾರವೇ ನಡೆಯುತ್ತದೆ. ವಾಸ್ತವ ಸಾಕ್ಷ್ಯಗಳ ಆಧಾರದ ಮೇಲೆ ಗಮನಿಸಿದ ವಿಷಯಗಳನ್ನು ಮೌಲ್ಯಮಾಪನದ ವೇಳೆ ಸಂಗ್ರಹಿಸಲಾಗುತ್ತದೆ.

ii. ವೈಯಕ್ತಿಕ ಸಂದರ್ಭದಲ್ಲಿ ರೈತರ, ಮೌಲ್ಯಮಾಪನವನ್ನು ನಿರ್ದಿಷ್ಟ ಸ್ಥಳದಲ್ಲಿ ನಡೆಸಿ, ರೈತರಿಗೆ ಮೌಖಿಕ ಪರೀಕ್ಷೆ (oral examination) ಮಾಡಬಹುದು. ಅನುಕೂಲವಿದ್ದರೆ ರೈತ ಕುಟುಂಬಕ್ಕೆ ಭೇಟಿ ನೀಡಿ ಮೌಲ್ಯಮಾಪನ ನಡೆಸಬಹುದು.

iii. ರೈತ ಕುಟುಂಬದ ಸಂದರ್ಭದಲ್ಲಿ, ET ರೈತ ಕುಟುಂಬದ ನಿವಾಸಕ್ಕೆ ಭೇಟಿ ನೀಡಿ ಮೌಖಿಕ ಮೌಲ್ಯಮಾಪನ ನಡೆಸುತ್ತದೆ.

iv. ಮೌಖಿಕ ಮೌಲ್ಯಮಾಪನದಲ್ಲಿ 30 ನಿಮಿಷಗಳ ಪ್ರಶ್ನೋತ್ತರ ಅಧಿವೇಶನ, ನಂತರ ರೈತ/ರೈತ ಕುಟುಂಬವು ET ಗೆ ಸಾಕ್ಷ್ಯ ಪ್ರದರ್ಶಿಸುವುದು; ಆ ಆಧಾರದ ಮೇಲೆ ET ಇನ್ನಷ್ಟು ಪ್ರಶ್ನೆಗಳನ್ನು ಕೇಳಬಹುದು. ಒಟ್ಟು ಮೌಲ್ಯಮಾಪನ ಅವಧಿ ಸಾಮಾನ್ಯವಾಗಿ 1 ಗಂಟೆ.

v. "ಜ್ಞಾನ" ಮತ್ತು "ಕೌಶಲ್ಯ" ವಿಭಾಗಗಳಲ್ಲಿನ ಪ್ರತಿ ಅಂಶವನ್ನು 1–5 ಪ್ರಮಾಣದಲ್ಲಿ ಅಂಕಗಳನ್ನು ನೀಡಲಾಗುತ್ತದೆ. ಪ್ರಮಾಣೀಕರಣ ಪಡೆಯಲು "ಜ್ಞಾನ" ಮತ್ತು "ಕೌಶಲ್ಯ" ಎರಡರಲ್ಲೂ ಕನಿಷ್ಠ 50% ಮತ್ತು ಒಟ್ಟಾರೆ 70% ಅಂಕ ಅಗತ್ಯ.

**4.6 ಮೌಲ್ಯಮಾಪನ ವರದಿ (Evaluation Report)**

ತಂಡದ ಮುಖ್ಯಸ್ಥ (TL), ತಾಂತ್ರಿಕ ತಜ್ಞ (TE) ಮತ್ತು ಹಿರಿಯ ರಾಗಿ ರೈತನ ನಿರೀಕ್ಷಣೆಗಳನ್ನು ಸೇರಿಸಿ ನಿಗದಿತ ಮಾದರಿಯಲ್ಲಿ ವರದಿಯನ್ನು ತಯಾರಿಸಿ, ಮೌಲ್ಯಮಾಪನ ಪೂರ್ಣಗೊಂಡ ನಂತರ ಗರಿಷ್ಠ 8 ದಿನಗಳೊಳಗೆ SSSUHE ಗೆ ಸಲ್ಲಿಸಬೇಕು.

**4.7 ಪರಿಶೀಲನೆ ಮತ್ತು ನಿರ್ಧಾರ (Review & Decision)**

ET ವರದಿ ಸ್ವೀಕರಿಸಿದ ನಂತರ, SSSUHE ವರದಿಯನ್ನು ಪ್ರಮಾಣೀಕರಣ ನಿರ್ಧಾರಕ್ಕಾಗಿ ಪರಿಶೀಲನೆ ಮತ್ತು ನಿರ್ಧಾರ (R & D) ಸಮಿತಿ ಮುಂದೆ ಇಡುತ್ತದೆ (ET ವರದಿ ಸ್ವೀಕರಿಸಿದ 5 ದಿನಗಳೊಳಗೆ). ಅಗತ್ಯವಿದ್ದರೆ R & D ಪ್ಯಾನೆಲ್ ET ತಂಡ ಮುಖ್ಯಸ್ಥನಿಂದ ಸ್ಪಷ್ಟೀಕರಣ/ಹೆಚ್ಚುವರಿ ಮಾಹಿತಿ ಕೇಳಬಹುದು (TL ಉತ್ತರವನ್ನು 8 ದಿನಗಳೊಳಗೆ ನೀಡಬೇಕು) ಹಾಗೂ ವರದಿಯನ್ನು ತಿದ್ದುಪಡಿ ಮಾಡಲು ET ಗೆ ಸೂಚಿಸಬಹುದು.

**4.8 ಪ್ರಮಾಣಪತ್ರ ವಿತರಣೆ (Issue of Certificate)**

i. ಪ್ರಮಾಣಪತ್ರ ವಿತರಣೆ – ಪ್ರಮಾಣಪತ್ರದ ಮಾನ್ಯತೆ 5 ವರ್ಷ.

ii. ಪ್ರಮಾಣಪತ್ರ ಮಾದರಿ ವಿವರಗಳು – ಅನುಬಂಧ ೩.

iii. ಸಹಿ ಮಾಡುವ ನಿಯೋಜಿತ ಅಧಿಕಾರಿಯ ವಿವರ –

**4.9 ಪ್ರಮಾಣಪತ್ರ ನಿರ್ವಹಣೆ (Maintenance of certificate)**

i. ಪ್ರಮಾಣಪತ್ರವನ್ನು ನಿರ್ವಹಿಸಲು, ರೈತನು ಮಾನ್ಯತೆ ಅವಧಿಯ ಮೂರನೇ ವರ್ಷದಲ್ಲಿ GPS ಟ್ಯಾಗ್ ಮಾಡಿದ ಫೋಟೋಗಳು, ವೀಡಿಯೊಗಳು ಮತ್ತು ದಾಖಲೆಗಳ ರೂಪದಲ್ಲಿ ಕೃಷಿ ಮುಂದುವರಿಸುತ್ತಿರುವ ಸಾಕ್ಷ್ಯವನ್ನು SSSUHE ಗೆ ಸಲ್ಲಿಸಬೇಕು. SSSUHE ಮೂರನೇ ವರ್ಷದ ಆರಂಭದಲ್ಲೇ ಈ ಸಾಕ್ಷ್ಯವನ್ನು ಕೇಳಬಹುದು.

ii. ರೈತನು ಮೇಲಿನಂತೆ ಸಾಕ್ಷ್ಯ ನೀಡಲು ಅಸಮರ್ಥನಾದರೆ, SSSUHE ಸಾಮರ್ಥ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸೀಮಿತ ಮೌಖಿಕ ಮೌಲ್ಯಮಾಪನ ನಡೆಸಬಹುದು.

**4.10 ಮರು ಪ್ರಮಾಣೀಕರಣ (Recertification)**

ಮರು ಪ್ರಮಾಣೀಕರಣ ಪ್ರಕ್ರಿಯೆ ಆರಂಭಿಕ ಪ್ರಮಾಣೀಕರಣದಂತೆ ಈ ಪ್ರಕ್ರಿಯೆಯು ಅದೇ ಹಂತಗಳನ್ನು ಅನುಸರಿಸುತ್ತದೆ. ಪ್ರಕ್ರಿಯೆ ಸಮಯಕ್ಕೆ ಪೂರ್ಣಗೊಳಿಸಲು SSSUHE ಪ್ರಮಾಣೀಕೃತ ರೈತರಿಗೆ ನವೀಕರಣದ ಕುರಿತು ಆರು ತಿಂಗಳು ಮುಂಚಿತವಾಗಿ ತಿಳಿಸುತ್ತದೆ.

**5.0 ಅಮಾನತು / ಹಿಂಪಡೆದುಕೊಳ್ಳುವುದು (Suspension / Withdrawal)**

i. ಅಮಾನತು (Suspension) – ಈ ಕೆಳಗಿನ ಸಂದರ್ಭಗಳಲ್ಲಿ ಪ್ರಮಾಣಪತ್ರವನ್ನು ಅಮಾನತುಗೊಳಿಸಬಹುದು:

a. ರೈತನು ಪ್ರಮಾಣಪತ್ರ ನಿರ್ವಹಣೆಗೆ ಅಗತ್ಯ ಸಾಕ್ಷ್ಯ ನೀಡಲು ಅಥವಾ ಅನ್ವಯಿಸುವ ಮೌಖಿಕ ಮೌಲ್ಯಮಾಪನಕ್ಕೆ ಹಾಜರಾಗಲು ವಿಫಲವಾದರೆ. ಈ ಅಮಾನತು ಅಗತ್ಯ ಪೂರೈಸುವವರೆಗೆ ಮುಂದುವರಿಯುತ್ತದೆ.

b. ಪ್ರಮಾಣಪತ್ರದ ಷರತ್ತುಗಳು ಮತ್ತು ನಿಯಮಗಳ ಉಲ್ಲಂಘನೆ.

c. ಯಾವುದೇ ದೂರು ಮಾನ್ಯವೆಂದು ಕಂಡುಬಂದರೆ.

d. ಕೆಳಗೆ ಕೊಟ್ಟಿರುವ (ii)ರ ಅನುಸಾರ ಕೆಲವು ಸಂದರ್ಭ ಹೊರತುಪಡಿಸಿ ರೈತನು ಪ್ರಮಾಣಪತ್ರವನ್ನು ದುರುಪಯೋಗಪಡಿಸುತ್ತಿರುವ ಯಾವುದೇ ಸಾಕ್ಷ್ಯ ಇದ್ದರೆ.

e. ರೈತನು ಪ್ರಮಾಣೀಕರಣ ಯೋಜನೆ / SSSUHE ಗೆ ಯಾವ ರೀತಿಯಲ್ಲಾದರೂ ಅವಮಾನ/ಅಪಕೀರ್ತಿ ತಂದರೆ.

ii. ಹಿಂಪಡೆದುಕೊಳ್ಳುವುದು (Withdrawal) – ಈ ಕೆಳಗಿನ ಸಂದರ್ಭಗಳಲ್ಲಿ ಪ್ರಮಾಣಪತ್ರವನ್ನು ಹಿಂಪಡೆಯಬಹುದು:

a. ಅಮಾನತು ಆರು ತಿಂಗಳಿಗಿಂತ ಹೆಚ್ಚು ಮುಂದುವರಿದರೆ.

b. ಪ್ರಮಾಣೀಕೃತ ರೈತ ಮರಣ ಹೊಂದಿದರೆ.

c. ರೈತನು ಸಾಮರ್ಥ್ಯವನ್ನು ನಿರ್ವಹಿಸಲು ಅಸಮರ್ಥನಾದರೆ.

d. ಸಾವಯವ ಉತ್ಪನ್ನ ಎಂದು ತಪ್ಪುಮಾರ್ಗದರ್ಶನ ಮಾಡಲು ರೈತನು ಪ್ರಮಾಣಪತ್ರವನ್ನು ದುರುಪಯೋಗಪಡಿಸುತ್ತಿರುವ ಯಾವುದೇ ಸಾಕ್ಷ್ಯ ದೊರಕಿದರೆ.

e. ಅಮಾನತು ಅಥವಾ ಹಿಂಪಡೆದುಕೊಳ್ಳುವ ಸಂದರ್ಭದಲ್ಲಿ, 15 ದಿನಗಳ ಕಾಲಾವಕಾಶ ನೀಡಿ ರೈತರಿಗೆ ಪ್ರತಿಕ್ರಿಯಿಸಲು ಅವಕಾಶ ನೀಡಲಾಗುತ್ತದೆ. ಅಗತ್ಯವಿದ್ದರೆ ವೈಯಕ್ತಿಕ ವಿಚಾರಣೆಯ ಅವಕಾಶವೂ ನೀಡಬಹುದು.

f. ಯಾವುದೇ ಸಮಯದಲ್ಲಿ ರೈತನು ಸ್ವಯಂಇಚ್ಛೆಯಿಂದ ಪ್ರಮಾಣೀಕರಣವನ್ನು ಅಮಾನತು ಮಾಡಬಹುದು ಅಥವಾ ಹಿಂಪಡೆದುಕೊಳ್ಳಬಹುದು; ಆದರೆ ಈ ಬಗ್ಗೆ SSSUHE ಗೆ ಅಗತ್ಯವಾಗಿ ಮಾಹಿತಿ ನೀಡಬೇಕು.

**6.0 ಮೇಲ್ಮನವಿ (Appeals)**

i. ಮೇಲ್ಮನವಿಯನ್ನು ನಿರ್ವಹಿಸುವ ಪ್ರಕ್ರಿಯೆ ಪ್ರಮಾಣೀಕರಣ ವ್ಯವಸ್ಥೆಯ ಪ್ರಮುಖ ಅಂಶವಾಗಿದ್ದು, ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ಬೆಂಬಲಿಸುತ್ತದೆ. ಈ ಪ್ರಕ್ರಿಯೆ ಸಾರ್ವಜನಿಕವಾಗಿ ಲಭ್ಯವಾಗಿರಬೇಕು ಹಾಗೇಯೇ ಯಾವುದೇ ಅಸಮಾಧಾನಗೊಂಡ ಅಭ್ಯರ್ಥಿ ಮೇಲ್ಮನವಿ ಸಲ್ಲಿಸಬಹುದು.

ii. ಮೇಲ್ಮನವಿಯ ಎಲ್ಲಾ ಹಂತಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ SSSUHEಯ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಈ ಜವಾಬ್ದಾರಿಯನ್ನು ಹೊರಗುತ್ತಿಗೆ ನೀಡುಲಾಗುವುದಿಲ್ಲ.

iii. ಮೇಲ್ಮನವಿಯ ನಿರ್ಧಾರವನ್ನು ಮೂಲ ಪರೀಕ್ಷೆ/ಮೌಲ್ಯಮಾಪನ/ಪ್ರಮಾಣೀಕರಣ ನಿರ್ಧಾರದಲ್ಲಿ ಭಾಗಿಯಾಗಿರದ SSSUHE ಯ ಉಪಕುಲಪತಿಗಳು (VC) ತೆಗೆದುಕೊಳ್ಳುತ್ತಾರೆ. VC ಅಗತ್ಯವಿದ್ದರೆ ಕೃಷಿ ಮತ್ತು ಸಿಬ್ಬಂದಿ ಪ್ರಮಾಣೀಕರಣ ತಜ್ಞರನ್ನು ಒಳಗೊಂಡ ಮೇಲ್ಮನವಿ ಸಮಿತಿ ರಚಿಸಬಹುದು.

iv. ಮೇಲ್ಮನವಿಯ ಪ್ರಕ್ರಿಯೆಯು SSSUHE ಮೇಲ್ಮನವಿದಾರರಿಗೆ ಸಾಂದರ್ಭಿಕ ಪ್ರಗತಿಯ ಮಾಹಿತಿ ನೀಡುತ್ತಿರುತ್ತದೆ. ಇದರಲ್ಲಿ ಮೇಲ್ಮನವಿ ಸ್ವೀಕೃತಿಯ ದೃಢೀಕರಣ, ಪರಿಶೀಲನೆಯ ಸ್ಥಿತಿ ಮತ್ತು ಯಾವುದೇ ವಿಳಂಬ ಅಥವಾ ಹೆಚ್ಚುವರಿ ಹಂತಗಳ ಕುರಿತಾದ ಮಾಹಿತಿಯು ಅಡಕಗೊಂಡಿರುತ್ತದೆ.

v. ನಿರ್ಧಾರಕ್ಕೆ ಬಂದ ನಂತರ, ಅಗತ್ಯವಿದ್ದರೆ ನಿರ್ಧಾರದ ಕಾರಣ ಸಹಿತ ಫಲಿತಾಂಶವನ್ನು SSSUHE ಸ್ಪಷ್ಟವಾಗಿ ತಿಳಿಸುತ್ತದೆ.

vi. ಸಂಪೂರ್ಣ ಮೇಲ್ಮನವಿಯ ನಿರ್ವಹಣೆ ಮತ್ತು ನಿರ್ಧಾರ ಪ್ರಕ್ರಿಯೆಯನ್ನು 30 ದಿನಗಳೊಳಗೆ ಪೂರ್ಣಗೊಳಿಸತಕ್ಕದ್ದು.

**7.0 ದೂರುಗಳು (Complaints)**

i. ದೂರುಗಳನ್ನು ನಿರ್ವಹಿಸುವ ಪ್ರಕ್ರಿಯೆಯು, ಸಿಬ್ಬಂದಿ ಪ್ರಮಾಣೀಕರಣ ವ್ಯವಸ್ಥೆಯೊಳಗಿನ ಅಗತ್ಯ ನಿಯಂತ್ರಣ ವ್ಯವಸ್ಥೆಯಾಗಿದೆ. SSSUHE ಯಾವುದೇ ಹಿತಾಸಕ್ತಿದಾರರಿಂದ ಬಂದ ದೂರುಗಳನ್ನು ಸ್ವೀಕರಿಸಲು, ಮೌಲ್ಯಮಾಪನ ಮಾಡಲು ಮತ್ತು ನಿರ್ಧಾರ ಕೈಗೊಳ್ಳಲು ದಾಖಲೀಕೃತ ಪ್ರಕ್ರಿಯೆಯನ್ನು ಸ್ಥಾಪಿಸಿ, ಅನುಷ್ಠಾನಗೊಳಿಸಿ ಮತ್ತು ನಿರ್ವಹಿಸಬೇಕು; ಈ ಪ್ರಕ್ರಿಯೆ ಸಾರ್ವಜನಿಕವಾಗಿ ಲಭ್ಯವಾಗಿರಬೇಕು.

ii. ದೂರು ಪ್ರಕ್ರಿಯೆಯಲ್ಲಿ ದೂರುದಾರರು, ಅರ್ಜಿದಾರರು, ಪ್ರಮಾಣೀಕೃತ ವ್ಯಕ್ತಿಗಳು ಮತ್ತು ಇತರ ಪ್ರಭಾವಿತ ಹಿತಾಸಕ್ತಿದಾರರು – ಎಲ್ಲರನ್ನೂ ನ್ಯಾಯಸಮ್ಮತವಾಗಿ ಮತ್ತು ಸಮಾನವಾಗಿ ಪರಿಗಣಿಸುವಂತೆ ವಿನ್ಯಾಸಗೊಂಡಿರಬೇಕು.

iii. ದೂರುಗಳನ್ನು ಪಕ್ಷಪಾತವಿಲ್ಲದೆ, ಹಿತಾಸಕ್ತಿ ಸಂಘರ್ಷವಿಲ್ಲದೆ ಮತ್ತು ಅಗತ್ಯವಿದ್ದಲ್ಲಿ ವಿಷಯಕ್ಕೆ ಸಂಬಂಧಿಸದ ಸ್ವತಂತ್ರ ಸಿಬ್ಬಂದಿಯಿಂದ ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಬೇಕು.

iv. ಪ್ರಮಾಣೀಕೃತ ವ್ಯಕ್ತಿಯ ಬಗ್ಗೆ ಬಂದ ದೂರು ಸಾಬೀತಾದರೆ, ಸೂಕ್ತ ಸಮಯದಲ್ಲಿ ಆ ಪ್ರಮಾಣೀಕೃತ ವ್ಯಕ್ತಿಗೆ ದೂರು ಕುರಿತು ತಿಳಿಸಿ, ಗೌಪ್ಯತೆಯನ್ನು ಕಾಪಾಡಬೇಕು.

v. ಪ್ರಮಾಣೀಕರಣ ಪ್ರಕ್ರಿಯೆಯ ಮೇಲಿನ ವಿಶ್ವಾಸವನ್ನು ಉಳಿಸಲು ಮತ್ತು ಯಾವುದೇ ಪಕ್ಷಕ್ಕೆ ಅನಗತ್ಯ ಹಾನಿ ತಪ್ಪಿಸಲು ಸಮಯಪಾಲನೆ ಬಹಳ ಮುಖ್ಯ. ಸಂಪೂರ್ಣ ದೂರು ನಿರ್ವಹಣೆ ಮತ್ತು ನಿರ್ಧಾರ ಪ್ರಕ್ರಿಯೆಯನ್ನು 30 ದಿನಗಳೊಳಗೆ ಪೂರ್ಣಗೊಳಿಸಬೇಕು.

**8.0 ದಾಖಲೆಗಳು (Records)**

ಅರ್ಜಿಗಳು, ನಂತರದ ಪತ್ರವ್ಯವಹಾರ, ಮೌಲ್ಯಮಾಪನ ಅನುಮೋದನೆಗಳು, ಮೌಲ್ಯಮಾಪನ ಯೋಜನೆಗಳು, ಮೌಲ್ಯಮಾಪನ ವರದಿಗಳು ಮತ್ತು ನಿರ್ಧಾರಗಳು, ಅಪೀಲ್ಗಳು ಮತ್ತು ದೂರುಗಳ ದಾಖಲೆಗಳನ್ನು ಭೌತಿಕ ಅಥವಾ ವಿದ್ಯುನ್ಮಾನ ಪ್ರತಿ ರೂಪದಲ್ಲಿ ಸಂಗ್ರಹಿಸಬೇಕು. ಎಲ್ಲಾ ದಾಖಲೆಗಳನ್ನು ಕನಿಷ್ಠ 5 ವರ್ಷಗಳ ಕಾಲ ಕಾಪಾಡಬೇಕು.